2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 145/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಡಾ. ಪ್ರತ್ಯಕ್ಷ ಭೈರವ | ಪಿಡಬ್ಲೂ - 19 |
| ತಂದೆಯ ಹೆಸರು | - | ಜೋಗಪ್ಪ | ಸಿಡಬ್ಲೂ - 19 |
| ವಯಸ್ಸು | - | 29 ವರ್ಷ | |
| ಉದ್ಯೋಗ | - | ವೈದ್ಯಾಧಿಕಾರಿ, ಕೈಮರ ಸರ್ಕಾರಿ ಆಸ್ಪತ್ರೆ | |
| ವಾಸ ಸ್ಥಳ | - | ಸಿಂದಿಗೆರೆ | |

ದಿನಾಂಕಃ 24-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ -

1. ನಾನು 2018 ನೇ ಇಸವಿ ಫೆಬ್ರವರಿ ತಿಂಗಳಿನಿಂದ ಇಲ್ಲಿಯವರೆಗೆ ಕೈಮರ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಎರಡು ವರ್ಷ ವಯಸ್ಸಿನ ಅಮಿಷಾ ಎಂಬ ಒಂದು ಹೆಣ್ಣು ಮಗು ಮೃತಪಟ್ಟಿದ್ದು, ಅದರ ಮರಣೋತ್ತರ ಪರೀಕ್ಷಾ ವರದಿಯನ್ನು ದಿನಾಂಕ 04.08.2019 ರಂದು ನಡೆಸಲಾಗಿದ್ದು ನಂತರ ಸದರಿ ಮಗುವಿನ ನಿಜವಾದ ತಂದೆ ಯಾರು ಎಂದು ತಿಳಿಯಲು ಅದರ ಬಲಕಾಲಿನ ತೊಡೆಯ ಮೂಳೆಯನ್ನು ಡಿ ಎನ್ ಎ ಪರೀಕ್ಷೆಗಾಗಿ ತೆಗೆದುಕೊಡುವಂತೆ ಚಿಕ್ಕಮಗಳೂರು ಗ್ರಾಮಾಂತರ ವೃತ್ತ ನಿರೀಕ್ಷಕರು ಚಿಕ್ಕಮಗಳೂರು ಜಿಲ್ಲಾ ಆರೋಗ್ಯ ಕುಟುಂಬ ಮತ್ತು ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು. ಅದರಂತೆ ಸದರಿಯವರು ನನಗೆ ಡಿ ಎನ್ ಎ ಪರೀಕ್ಷೆಗಾಗಿ ಸದರಿ ಮಗುವಿನ ಬಲಕಾಲಿನ ತೊಡೆಯ ಮೂಳೆಯನ್ನು ತೆಗೆದುಕೊಡುವಂತೆ ಸೂಚಿಸಿದ್ದರು.

3. ಅದರಂತೆ ನಾನು ದಿನಾಂಕ 10.08.2019 ರಂದು ರಾಮನಹಳ್ಳಿಯಲ್ಲಿರುವ ಮುಸ್ಲಿಂ ಜನಾಂಗದ ಸ್ಮಶಾನಕ್ಕೆ ಹೋಗಿದ್ದೆನು. ಅಲ್ಲಿಗೆ ಪ್ರಾಸಾ.16 ಮತ್ತು ಮುನಿಸಿಪಾಲಿಟಿಯ ಕೆಲಸಗಾರರು ಬಂದಿದ್ದರು ಮತ್ತು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಗ್ರೂಪ್ ಡಿ ನೌಕರನಾದ ಚೆನ್ನಕೇಶವರವರು ನನ್ನ ಸಹಾಯಕ್ಕೆ ಬಂದಿದ್ದರು. ಮೃತ ಮಗುವಿನ ಸಂಬಂಧಿಕರು ಮಗುವನ್ನು ದಫನ್ ಮಾಡಲಾಗಿದ್ದ ಸ್ಥಳವನ್ನು ತೋರಿಸಿದರು. ಆಗ ಸಮಯ ಬೆಳಿಗ್ಗೆ 11.00 ಗಂಟೆಯಾಗಿತ್ತು. ನಂತರ ಸದರಿ ಸ್ಥಳವನ್ನು ಪೌರಕಾರ್ಮಿಕರು ಅಗೆದು ನೋಡಲಾಗಿ ಅಲ್ಲಿ ಬಿಳಿಯ ಬಟ್ಟೆಯಲ್ಲಿ ಸುತ್ತಲಾಗಿದ್ದ ಎರಡು ವರ್ಷ ವಯಸ್ಸಿನ ಒಂದು ಹೆಣ್ಣು ಮಗುವಿನ ಶವ ಕಂಡು ಬಂತು. ಮಗುವಿನ ಶವ ಕೊಳೆತ ಸ್ಥಿತಿಯಲ್ಲಿ ಇರಲಿಲ್ಲ. ಸದರಿ ಮಗುವಿನ ಬಲಕಾಲಿನ ತೊಡೆಯ ಮೂಳೆಯನ್ನು ಚೆನ್ನಕೇಶವರವರು ನನ್ನ ಆದೇಶದ ಮೇರೆಗೆ ತೆಗೆದರು. ಮೇಲೆ ಹೇಳಿದಂತೆ ಸ್ಮಶಾನದಲ್ಲಿ ಮಗುವಿನ ಬಲಕಾಲಿನ ತೊಡೆಯ ಮೂಳೆಯನ್ನು ತೆಗೆಯುವ ಸಮಯದಲ್ಲಿ ಪೊಲೀಸರು ಮಹಜರನ್ನು ಮಾಡಿಕೊಂಡಿರುತ್ತಾರೆ. ಆ ಸಮಯದಲ್ಲಿ ಮಳೆ ಬರುತ್ತಿದ್ದರಿಂದ ಸದರಿ ಮೂಳೆಯನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಅದನ್ನು ಒಂದು ಬಾಕ್ಸಿನಲ್ಲಿ ಹಾಕಿ ಶೇಖರಿಸಿ ಅದರ ಮೇಲೆ ಬಿಳಿಯ ಬಟ್ಟೆಯನ್ನು ಸುತ್ತಿ ಸೀಲನ್ನು ಹಾಕಿ ಎಫ್ ಎಸ್ ಎಲ್ ಗೆ ಡಿ ಎನ್ ಎ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಚಿಕ್ಕಮಗಳೂರು ಗ್ರಾಮಾಂತರ ವೃತ್ತ ನಿರೀಕ್ಷಕರಿಗೆ ನೀಡಿರುತ್ತೇನೆ. ಆ ಬಗ್ಗೆ ನಾನು ಮಡಿವಾಳ ವಿಭಾಗದ ಡಿ ಎನ್

ಎ ನಿರ್ದೇಶಕರಿಗೆ ಮೇಲೆ ಹೇಳಿದಂತೆ ಸಂಗ್ರಹಿಸಿದ ಮಗುವಿನ ಬಲಕಾಲಿನ ತೊಡೆಯನ್ನು ಡಿ ಎನ್ ಎ ಪರೀಕ್ಷೆಗೆ ಒಳಪಡಿಸುವ ಬಗ್ಗೆ ಪತ್ರ ಬರೆದು ಅದರೊಂದಿಗೆ ಸದರಿ ಮೂಳೆಯನ್ನು ಸಂಗ್ರಹಿಸಿ ಅದರ ಮೇಲೆ ಬಿಳಿಯ ಬಟ್ಟೆಯನ್ನು ಹಾಕಿ ಮೊಹರು ಮಾಡಿದ ಸೀಲಿನ ಮಾದರಿಯನ್ನು ಸಂಬಂಧಿಸಿದ ಪೊಲೀಸರಿಗೆ ನೀಡಿರುತ್ತೇನೆ. ಸದರಿ ಪತ್ರದ ದೃಢೀಕೃತ ಪ್ರತಿಯನ್ನು ನೋಡುತ್ತಿದ್ದು, ಅದನ್ನು ನಿಪಿ.71 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.71(ಎ) ಎಂದು ಗುರುತಿಸಲಾಯಿತು. ಮಾದರಿ ಸೀಲನ್ನು ನಿಪಿ.72 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.72(ಎ) ಎಂದು ಗುರುತಿಸಲಾಯಿತು. ಮಗುವಿನ ಶವವನ್ನು ಹೊರತೆಗೆದಾಗ ಅದು ಕೊಳೆತಿರಲಿಲ್ಲ ಮತ್ತು ಗುರುತಿಸುವ ಸ್ಥಿತಿಯಲ್ಲಿ ಇತ್ತು.

4. ಸಾಕ್ಷಿಯು ಈಗಾಗಲೇ ನಿಪಿ.2 ರಿಂದ ನಿಪಿ.4 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ತೋರಿಸಲಾಗಿ ಅದರಲ್ಲಿ ಮೇಲೆ ಹೇಳಿದಂತೆ ನಾನು ಬಲಕಾಲಿನ ತೊಡೆಯ ಮೂಳೆಯನ್ನು ಸಂಗ್ರಹಿಸಿದ ಮಗುವಿನ ಶವವಿರುವುದು ಕಂಡು ಬರುತ್ತದೆ.

<u>ಪಾಟೀ ಸವಾಲುಃ ಶ್ರೀ ಬಿ ಎಂ ಎಲ್ ಜಿ ವಕೀಲರಿಂದಃ ಆರೋಪಿ ಪರವಾಗಿಃ</u>

5. ಪೊಲೀಸರಿಂದ ಡಿ ಹೆಚ್ ಒ ರವರಿಗೆ ಬಂದ ಮತ್ತು ಸದರಿ ಡಿ ಹೆಚ್ ಒ ರವರಿಂದ ನನಗೆ ಬಂದ ಮನವಿಯನ್ನು ನಾನು ಹಾಜರುಪಡಿಸಿಲ್ಲ. ಶವವನ್ನು ಹೊರತೆಗೆಯುವ ಸಮಯದಲ್ಲಿ

ಸುಮಾರು 5-6 ಜನ ಸ್ಥಳದಲ್ಲಿ ಹಾಜರಿದ್ದರು. ಆ ರೀತಿ ಹಾಜರಿದ್ದವರು ಯಾರು ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ತಹಶೀಲ್ದಾರ್, ನಾನು, ಪೌರಕಾರ್ಮಿಕರು, ನನ್ನ ಸಹಾಯಕ ಚೆನ್ನಕೇಶವ ಮತ್ತು ಮಗುವಿನ ಸಂಬಂಧಿಕರು ಎನ್ನುತ್ತಾರೆ.

6. ಮಗುವನ್ನು ದಫನ್ ಮಾಡಲಾಗಿತ್ತು ಎಂದು ಹೇಳಲಾದ ಸ್ಥಳದಲ್ಲಿ ಅದರ ಜನನ ಮತ್ತು ಮರಣದ ದಿನಾಂಕವನ್ನು ನಮೂದಿಸಿದ ಕಲ್ಲನ್ನು ನೆಡಲಾಗಿತ್ತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಶವವನ್ನು ಹೊರತೆಗೆಯುವ ಸಮಯದಲ್ಲಿ ವೀಡಿಯೋ ಮಾಡಲಾಗಿತ್ತೇ ಎಂದರೆ ಸಾಕ್ಷಿ ಇಲ್ಲ ಫೋಟೋಗಳನ್ನು ತೆಗೆಯಲಾಗಿದೆ ಎನ್ನುತ್ತಾರೆ.

7. ಊತಿದ್ದ ಶವವನ್ನು ಹೊರತೆಗೆಯಲಾಯಿತು ಎಂದು ಹೇಳಿದ್ದೀರಿ ಆ ಸಮಯದಲ್ಲಿ ಮಗುವಿನ ಶವದ ತಲೆಯ, ಕೈಗಳ, ಹಂಡಿನ ಮತ್ತು ಹಿಮ್ಮಡಿಗಳ ಕೆಳಭಾಗದ ಮಣ್ಣನ್ನು ಸಂಗ್ರಹಿಸಲಾಯಿತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಶವದ ಹಲವಾರು ಭಾಗಗಳಲ್ಲಿ ಕುಯ್ದು ಹೊಲಿಗೆ ಹಾಕಿರುವುದು ಕಂಡು ಬಂದಿತೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನೀವು ಹೇಳಿದಂತೆ ಬಲಕಾಲಿನ ತೊಡೆಯ ಮೂಳೆಯನ್ನು ಸಂಗ್ರಹಿಸಿದ ಕೂಡಲೇ ಅದನ್ನು ಜಿಲ್ಲಾ ಆಸ್ಪತ್ರೆಗೆ ತೆಗೆದುಕೊಂಡು ಬರುವ ಮೊದಲು ಅದಕ್ಕೆ ಯಾವುದಾದರೂ preservative ಅನ್ನು ಹಾಕಿ ಸಂಗ್ರಹಿಸಿದ್ದೀರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

8. ನಿಪಿ.2 ರಿಂದ ನಿಪಿ.4 ಎಂದು ಗುರುತಿಸಲ್ಪಟ್ಟಿರುವ

ಫೋಟೋಗಳಲ್ಲಿ ಶವವು intact ಆಗಿರುವುದು ಕಂಡು ಬರುತ್ತದೆ ಎಂದರೆ ಸರಿ. ನೀವು ಸಂಗ್ರಹಿಸಿದ್ದೀರಿ ಎಂದು ಹೇಳಲಾದ ಬಲಕಾಲಿನ ತೊಡೆಯ ಮೂಳೆಯನ್ನು ಜಿಲ್ಲಾ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾಗಿ ಹೇಳಿದ್ದೀರಿ ಅಲ್ಲಿ ಅದಕ್ಕೆ ಯಾವುದಾದರೂ preservative ಅನ್ನು ಹಾಕಿ ಸಂಗ್ರಹಿಸಿದ್ದೀರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

9. ದಿನಾಂಕ 10.08.2019 ರಂದು ರಾಮನಹಳ್ಳಿಯಲ್ಲಿರುವ ಮುಸ್ಲಿಂ ಜನಾಂಗಕ್ಕೆ ಸೇರಿದ ಸ್ಮಶಾನಕ್ಕೆ ಹೋಗಿದ್ದಾಗಿ, ಅಲ್ಲಿ ದಫನ್ ಮಾಡಲಾಗಿದ್ದ ಹೆಣ್ಣು ಮಗುವಿನ ಶವವನ್ನು ಪ್ರಾಸಾ.16 ರವರು ಸಿಬ್ಬಂದಿ ಮೂಲಕ ಹೊರಗೆ ತೆಗೆಸಿದ್ದಾಗಿ ಮತ್ತು ನೀವು ಅದರ ಬಲಕಾಲಿನ ತೊಡೆಯ ಮೂಳೆಯನ್ನು ಸಂಗ್ರಹಿಸಿ ಸಂಬಂಧಪಟ್ಟ ಪೊಲೀಸರಿಗೆ ನೀಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ಬಗ್ಗೆ ಪೊಲೀಸರು ಪಂಚನಾಮೆಯನ್ನು ಜರುಗಿಸಿದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ. )
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ